"ಏ ಮಸ್ಕರಿ ಮಾಡ್ಬೇಡ್ರೆ..." ಎಂದ.

"ಇಬ್ಬರಲ್ಲಿ ಒಬ್ಬಳು ಚಾಲಾಕಿ ಚೆಲುವೆ; ಒಬ್ಬಳು ಅಕ್ಕು ಹಾಂಗೆ ಸ್ಟ್ರಿಕ್ಟು; ಅವಳು ಭಾರತಿಯೊ ಮಾಲತಿಯೊ ಗೊತ್ತಾಗ್ಲಿಲ್ಲೆ; ಮನಸು ಮಾಡಿದ್ರೆ ಇಂದು ರಾತ್ರೀನೆ ಶೋಭನ ಆಗ್ತು; ಆದ್ರೆ ಈ ಅಕ್ಕತಂಗಿಯರ ಕಂಡಕೂಡ್ಲೆ ಅಪ್ಪಿಯಕ್ಕ ಮತ್ತೆ ಅಕ್ಕು ನೆನಪಾಗ್ತ್ರ ಮಾರಾಯ; ನನಗೆ ಮಳ್ಳು ಹಿಡದ್ದನಾ?" ಗುಟ್ಟಾಗಿ ಪಿಸು ದನಿಯಲ್ಲಿ ಉಸುರಿ ಮತ್ತೆ ಗದ್ಗಿತನಾದ.



"ನೀನು ಮೊದಲಿನ ದತ್ತು ಅಲ್ಲ. ಇದೆಲ್ಲ ಒಳ್ಳೇದಲ್ಲ" ಅನಂತ ತಡೆಯಲಾರದೆ ಬಾಯಿ ಬಿಟ್ಟ.

"ಅನಂತಣ್ಣ ಗೊತ್ತಾತು ನೀನೂ ಆಯಿ ಪಕ್ಷದವನೇ; ಐ ವಾಂಟ್ ಒನ್ ಹೆಲ್ಪ್... ಆಯಿ ಬೂಂದಿ ಲಾಡು ಮಾರಿದ ದುಡ್ಡನಲ್ಲಿ ಚಿನ್ನದ ಸರ ಗೇಯಿಸಿ ಮಾವನ ಮನೇಲಿ ಯಾರದ್ದೊ ತಾಬಾ ಇಟ್ಟಿದಡ. ನನಗೆ ಅದ್ರ ಮ್ಯಾಲೆ ಎಳ್ಳಷ್ಟೂ ಆಸೆ ಇಲ್ಲೆ. ಅದನ್ನ ಇಟ್ಕಂಡವ ದಕ್ಕಸ್ತ ಬಿಡು; ಈ ಆಯಿ ಕಂಡ ಕಂಡವರ ಕಾಲು ಹಿಡ್ದು 'ದತ್ತುಗೆ ಸಣ್ಣ ಚಾಕರಿ ಕೊಡ್ಸಿ, ಅವನ ಮದುವೆಗೆ ಬಂಗಾರ ಇಟ್ಟಿದ್ದೆ, ಸೊಸೆ ಕೈಯಲ್ಲೆ ಕೊಡ್ತೆ, ಒಂದು ಕೂಸ್ನ ನೋಡಿ ಅವಂಗೆ' ಎಂದು ಹಲಬ್ತಾ ಅಡ್ಡಾಡ್ತಲೊ. ನನ್ನ ಮಾನ ಮೂರು ಕಾಸಿಗೆ ಬಂತು, ಈ ದತ್ತು ತಲೇಲಿ ಬರೀ ಶಗಣಿ ತುಂಬ್ಕಂಡಿಲ್ಲೆ; ನನ್ನ ಪಾಡಿಗೆ ನನ್ನ ಬಿಡೋದಕ್ಕೆ ಹೇಳೋ ಆಯಿಗೆ. ಒಂದ್ ಉಪ್ಕಾರ ಅಷ್ಟೇ ಸಾಕು" ದತ್ತು ಎರಡು ತುತ್ತು ಉಂಡಂತೆ ಮಾಡಿ ತಾಟಿನಲ್ಲಿ ಕೈ ತೊಳೆದ; ತಂದಿಟ್ಟ ಇಡ್ಲಿ ನೊಣದ ಪಾಲಾಯಿತು; ನಶೆಗೆ ಶರೀರದ ಶಕ್ತಿಗುಂದಿ ತೇಲುಗಣ್ಣಿನ ತೊನೆದಾಟದಲ್ಲಿ ತೊದಲುತ್ತ ದತ್ತು ಕಾಲೊರೆಸಲು ಹಾಸಿದ ಗೋಣಿ ಚೀಲದ ಮೇಲೆ ಕುಸಿದು ಬೋರಲಾದ. "ಸ್ವಲ್ಪ ಹೊತ್ತು, ಅನಂತ್ರ ಸರಿ ಹೋಗ್ತದೆ, ನಮಗೆ ಇದೆಲ್ಲ ಹೊಸತಲ್ಲ" ಪುಂಡಲೀಕನ ಉದಾಸೀನ ಮಾತಿಗೆ ಅನಂತ ಬಿಲ್ ಕೊಡಲು ಕೇಳಿದ. "ನೀವೇ ಕೊಡ್ತೀರೊ, ಅವರಿಂದ ಬರೊ ಬಾಕಿ ಬಾಳದೆ..." ಪುಂಡಲೀಕ ದುಡ್ಡು ಪಡೆದು, ಡ್ರಾವರಲ್ಲಿಡುತ್ತ, "ಸರಿ ಆಯ್ತು" ಎಂದ.

ಮತ್ತೆ ಮೋಡ ಜಮಾಯಿಸಿತು; ದೀಪ ಹಚ್ಚಬೇಕೆನ್ನುವಷ್ಟು ಕಪ್ಪಾಯಿತು; ಮೋಡ ಅಲೆಯಾಗಿ ಸುರುಳಿ ಸುತ್ತಿ ಅಬ್ಬರಿಸಿತು; ಕೋಲ್ಮಿಂಚು ಹಾವಿನಂತೆ ಬಳುಕಿ ಕೆಳಗಿಳಿಯಿತು; ಗುಡುಗಿಗೆ ಪುಂಡಲೀಕನ ಮನೆ ನಡುಗಿತು. ವಿಲಕ್ಷಣ ಉತ್ಸಾಹದ ಕೋಲಾಹಲ ಸಂಚರಿಸಿತು; ಮಾಡಿನ ಹಂಚು ಹಾರುವಂತೆ ಗಾಳಿ ಸಿಳ್ಳೆ ಹಾಕಿ ನುಸುಳುತ್ತಿತ್ತು; "ಮ್ಯಾಲೆ ಬನ್ನಿ" ಪುಂಡಲೀಕ ಅನಂತನನ್ನು ಬಾಂಕಿಗೆ ಕರೆದ. "ಜೋರೇ ಹೋಯ್ತಾರಬಲ" ಎಂದ. ಮೊದಲ ಮಳೆಯ ಪರಿಮಳ ಪಸರಿಸಿತು; ಮಳೆ ಹೊಯ್ಯಿತು; ಯಾಕೊ ಅನಂತನಿಗೆ ಹನಿಗಳ ಸಿಂಪರಣೆ ಸೋಕುತ್ತಿದ್ದಂತೆ ಹಿತ್ತಲ ತಂತಿಗೆ ರಾತ್ರಿಯ ಇಬ್ಬನಿಗೆ ಒದ್ದೆಯಾಗಿರುತ್ತಿದ್ದ ಮಾಸ್ತರ ತೂತು ಬನಿಯನ್ ನೆನಪಾಯಿತು; ಮಾಸ್ತರ ಋಣ, ಸಲೀಲತ್ತೆಯ ಬಿಡುಗಡೆಯಿಲ್ಲದ ಸಂಕಟ, ದತ್ತುನ ಹೊಯ್ದಾಟ, ಪರಿಹಾರದ ಕೊನೆಗೆ ಒಯ್ಯಲಾರದ ಅಕ್ಕುನ ಅಪೇಕ್ಷೆ ನೊರೆ ನೊರೆ ಕೆನ್ನೀರಿನಂತೆ ರಸ್ತೆಯಲ್ಲಿ ಹರಿದು ಹೋಯಿತು; ಅಳುತ್ತಿರುವ ಅನಾಥ ಶಿಶುವನ್ನು ದಾರಿ ಮಧ್ಯೆ ಕೈಚೆಲ್ಲಿ